ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ
Bangalore Development Authority

ಸಂಖ್ಯೆ : ಬೆಂಅಪ್ರಾ/ನಯೋಸ/PRL-111/3593/2024-25.
No.

ದಿನಾಂಕ :
Date : 29/03/2025

ಏಕ ನಿವೇಶನ ವಸತಿ ವಿನ್ಯಾಸ ನಕ್ಷೆ ಅನುಮೋದನೆ ಪತ್ರ

[ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961 ರ ಕಲಂ 17 ರ ಅಡಿಯಲ್ಲಿ]

ವಿಷಯ:- ಬೆಂಗಳೂರು ಪೂರ್ವ ತಾಲ್ಲೂಕು, ಕೆ.ಆರ್ ಪುರ ಹೋಬಳಿ, ನಲ್ಲೂರಹಳ್ಳಿ ಗ್ರಾಮದ ಸ.ನಂ.1/1 ರ ಪೈಕಿ 1ಎ-00ಗುಂ ವಿಸ್ತೀರ್ಣದ ಜಮೀನಿನಲ್ಲಿ ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961 ರ ಕಲಂ 17 ರ ಅಡಿಯಲ್ಲಿ ವಸತಿ ಉದ್ದೇಶದ ಏಕ ನಿವೇಶನ ನಕ್ಷೆಗೆ ಶ್ರೀ.ಲೂಯಿಜಾನ್ ಕುರಿಯನ್ ರವರ ಪರವಾಗಿ ನೋಂದಾಯಿತ ಜಿ.ಪಿ.ಎ & ಜೆ.ಡಿ.ಎ ದಾರರಾದ M/s.Mybridie Solutions LLP ರವರ ಪರವಾಗಿ ಅನುಮೋದನೆ ನೀಡುವ ಬಗ್ಗೆ.

ಉಲ್ಲೇಖ:
1. ಪ್ರಾಧಿಕಾರದ ಸಭೆಯ ಠರಾವು ಸಂಖ್ಯೆ 181/2024, ದಿನಾಂಕ 29.10.2024 ರ ನಡವಳಿ.
2. ಅರ್ಜಿದಾರರ ಅರ್ಜಿ ದಿನಾಂಕ 14.11.2024.
3. ಈ ಕಛೇರಿ ಪತ್ರ ಸಂಖ್ಯೆ ಬೆಂಅಪ್ರಾ/ನಯೋಸ/PRL-111/2794/2024-25, ದಿನಾಂಕ 23.01.2025.
4. ತಹಶೀಲ್ದಾರ್,ಬೆಂಗಳೂರು ಪೂರ್ವ ತಾಲ್ಲೂಕು ರವರಿಗೆ ಈ ಕಛೇರಿ ಪತ್ರ ಸಂಖ್ಯೆ: ಬೆಂಅಪ್ರಾ/ನಯೋಸ/PRL-111/2794/2024-25, ದಿನಾಂಕ 23.01.2025
5. ಕೆನರಾ ಬ್ಯಾಂಕ್ ಚಲನ್ ನಂ.GN25029403, ದಿನಾಂಕ 14.02.2025.
6. ತಹಶೀಲ್ದಾರ್,ಬೆಂಗಳೂರು ಪೂರ್ವ ತಾಲ್ಲೂಕು ರವರಿಗೆ ಈ ಕಛೇರಿ ಪತ್ರ ಸಂಖ್ಯೆ: ಬೆಂಅಪ್ರಾ/ನಯೋಸ/PRL-111/3226/2024-25, ದಿನಾಂಕ 06.03.2025

******

ಉಲ್ಲೇಖ [2] ರ ಅರ್ಜಿಯಲ್ಲಿ ಬೆಂಗಳೂರು ಪೂರ್ವ ತಾಲ್ಲೂಕು, ಕೆ.ಆರ್ ಪುರ ಹೋಬಳಿ, ನಲ್ಲೂರಹಳ್ಳಿ ಗ್ರಾಮದ ಸ.ನಂ.1/1 ರ ಪೈಕಿ 1ಎ-00ಗುಂ ವಿಸ್ತೀರ್ಣದ ಜಮೀನಿನಲ್ಲಿ ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961 ರ ಕಲಂ 17 ರ ಅಡಿಯಲ್ಲಿ ವಸತಿ ಉದ್ದೇಶದ ಏಕ ನಿವೇಶನ ವಿನ್ಯಾಸ ನಕ್ಷೆಗೆ ಅನುಮೋದನೆ ನೀಡಲು ಶ್ರೀ.ಲೂಯಿಜಾನ್ ಕುರಿಯನ್ ರವರ ಪರವಾಗಿ ನೋಂದಾಯಿತ ಜಿ.ಪಿ.ಎ & ಜೆ.ಡಿ.ಎ ದಾರರಾದ M/s.Mybridie Solutions LLP ರವರು ಕೋರಲಾಗಿರುತ್ತದೆ.

ಏಕ ನಿವೇಶನ ವಿನ್ಯಾಸ ನಕ್ಷೆಗಳ ಅನುಮೋದನೆ ಕುರಿತು ಉಲ್ಲೇಖ [1] ರಲ್ಲಿ ನಮೂದಿಸಿರುವ ದಿನಾಂಕ 29.10.2024 ರ ಪ್ರಾಧಿಕಾರದ ಸಭೆಯ ಠರಾವು ಸಂಖ್ಯೆ.181/2024 ರ ನಡವಳಿ ಅನುಸಾರ ವಸತಿ ಉದ್ದೇಶದ ಏಕ ನಿವೇಶನ ವಿನ್ಯಾಸ ನಕ್ಷೆ ಅನುಮೋದನೆ ಸಂಬಂಧ ಅರ್ಜಿದಾರರಿಗೆ ವಿವಿಧ ಶುಲ್ಕಗಳ ಬಾಬ್ತು ಒಟ್ಟು ರೂ.5,57,270/- ಗಳನ್ನು ಪ್ರಾಧಿಕಾರಕ್ಕೆ ಪಾವತಿಸಲು ಉಲ್ಲೇಖ [3] ರ ಈ ಕಛೇರಿ ಪತ್ರದಲ್ಲಿ ತಿಳಿಸಲಾಗಿತ್ತು. ಉಲ್ಲೇಖ [5] ರಲ್ಲಿ ಅರ್ಜಿದಾರರು ಕೆನರಾ ಬ್ಯಾಂಕ್ ಚಲನ್ ನಂ.GN25029403 ರ ಮೂಲಕ ದಿನಾಂಕ 14.02.2025 ರಂದು ರೂ.5,57,270/- ಗಳನ್ನು ಪ್ರಾಧಿಕಾರದ ಖಾತೆಗೆ ಜಮಾ ಮಾಡಿ ಚಲನ್ ಪ್ರತಿಯನ್ನು ಈ ವಿಭಾಗಕ್ಕೆ ಸಲ್ಲಿಸಲಾಗಿರುತ್ತದೆ.

ಉಲ್ಲೇಖ [4] & [6] ರಲ್ಲಿ ನಮೂದಿಸಿರುವ ಈ ಕಛೇರಿ ಪತ್ರಗಳಲ್ಲಿ ಸರ್ಕಾರದ ಸುತ್ತೋಲೆ ಸಂಖ್ಯೆ:ನಅಇ 363 ಬಿಎಂಆರ್ 202 (ಇ), ದಿನಾಂಕ 12.2.2024 ರ ಅನುಸಾರ ಪ್ರಶ್ನಿತ ಬೆಂಗಳೂರು ಪೂರ್ವ ತಾಲ್ಲೂಕು, ಕೆ.ಆರ್ ಪುರ ಹೋಬಳಿ, ನಲ್ಲೂರಹಳ್ಳಿ ಗ್ರಾಮದ ಸ.ನಂ.1/1 ರ ಪೈಕಿ 1ಎ-09.25ಗುಂ ವಿಸ್ತೀರ್ಣದ ಜಮೀನಿನ ಕುರಿತು ಯಾವುದೇ ವ್ಯಾಜ್ಯ / ಪ್ರಕರಣ / ತಕರಾರುಗಳು ಇದ್ದಲ್ಲಿ 15 ದಿನಗಳೊಳಗಾಗಿ ಮಾಹಿತಿ ನೀಡಲು ತಹಶೀಲ್ದಾರ್

---

ರವರು ಬೆಂಗಳೂರು ಪೂರ್ವ ತಾಲ್ಲೂಕು, ಕೆ.ಆರ್.ಪುರ ರವರನ್ನು ಕೋರಲಾಗಿದ್ದು, ಪ್ರಶ್ನಿತ ಜಮೀನಿಗೆ ಸಂಬಂಧಿಸಿದಂತೆ ವ್ಯಾಜ್ಯ / ಪ್ರಕರಣ / ತಕರಾರುಗಳು ಇರುವ ಬಗ್ಗೆ ಯಾವುದೇ ಮಾಹಿತಿ ಸ್ವೀಕೃತವಾಗಿರುವುದಿಲ್ಲ. ಆದ್ದರಿಂದ, ಸರ್ಕಾರದ ಸುತ್ತೋಲೆ ಸಂಖ್ಯೆ:ನಅಇ 363 ಬಿಎಂಆರ್ 202 (ಇ), ದಿನಾಂಕ 12.2.2024 ರ ಅನುಸಾರ ಪ್ರಶ್ನಿತ ಜಮೀನಿನ ಕುರಿತು ಯಾವುದೇ ವ್ಯಾಜ್ಯ / ಪ್ರಕರಣ / ತಕರಾರುಗಳು ಇಲ್ಲವೆಂದು ಭಾವಿಸಿ ಅನುಮೋದನೆ ನೀಡಲು ಕ್ರಮವಹಿಸಲಾಗಿದೆ.

ಸಲ್ಲಿಸಿರುವ ವಸತಿ ಉದ್ದೇಶದ ಏಕ ನಿವೇಶನ ವಿನ್ಯಾಸ ನಕ್ಷೆಯಲ್ಲಿ ಪ್ರಶ್ನಿತ ಜಮೀನಿನ ಪೂರ್ವದಲ್ಲಿರುವ ಹಾಲಿ ರಸ್ತೆಯನ್ನು ಅನುಮೋದಿತ ಮಹಾಯೋಜನೆ RMP-2015 ರ ರೀತ್ಯ 18.0ಮೀ ಅಗಲದ ಪ್ರಸ್ತಾಪಿತ ರಸ್ತೆ ಪಂಕ್ತೀಕರಣವನ್ನು ಕಾಯ್ದಿರಿಸಿದ್ದು, ಸದರಿ ಪ್ರಸ್ತಾಪಿತ ರಸ್ತೆ ಪಂಕ್ತೀಕರಣದ ಜಾಗವನ್ನು ಸಾರ್ವಜನಿಕ ಉಪಯೋಗಕ್ಕಾಗಿ ನೋಂದಾಯಿತ ಪರಿತ್ಯಜನಾ ಪತ್ರದ ಮೂಲಕ ಮುಫತ್ತಾಗಿ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಗೆ ಹಸ್ತಾಂತರಿಸಿಕೊಂಡು, ಕಟ್ಟಡ ನಕ್ಷೆ ಅನುಮೋದನೆ ಸಂದರ್ಭದಲ್ಲಿ ಪ್ರಶ್ನಿತ ಜಮೀನಿಗೆ ಲಗತ್ತಾಗಿರುವ ಹಾಲಿ ರಸ್ತೆಯ ಏಕರೂಪ ಹಾಲಿ ಅಗಲಕ್ಕನುಗುಣವಾಗಿ ವಲಯ ನಿಯಮಾವಳಿಗಳ ಅನುಸಾರ ಅನುಮತಿಸಬಹುದಾದ ಗರಿಷ್ಠ ಎಫ್.ಎ.ಆರ್ ಅನುಪಾತವನ್ನು ಕಟ್ಟಡ ನಕ್ಷೆ ಅನುಮೋದಿಸುವ ಸಕ್ಷಮ ಪ್ರಾಧಿಕಾರವು ಅನುಮೋದನೆಗೆ ಕ್ರಮವಹಿಸಬೇಕಿರುತ್ತದೆ.

ಮೇಲ್ಕಂಡ ಅಂಶಗಳ ಹಿನ್ನೆಲೆಯಲ್ಲಿ, ಬೆಂಗಳೂರು ಪೂರ್ವ ತಾಲ್ಲೂಕು, ಕೆ.ಆರ್ ಪುರ ಹೋಬಳಿ, ನಲ್ಲೂರಹಳ್ಳಿ ಗ್ರಾಮದ ಸ.ನಂ.1/1 ರ ಪೈಕಿ 1ಎ-00ಗುಂ ವಿಸ್ತೀರ್ಣದ ಜಮೀನಿನಲ್ಲಿ ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961 ರ ಕಲಂ 17 ರ ಅಡಿಯಲ್ಲಿ ವಸತಿ ಉದ್ದೇಶದ ಏಕ ನಿವೇಶನ ವಿನ್ಯಾಸ ನಕ್ಷೆಗೆ ಈ ಕೆಳಕಂಡ ಷರತ್ತುಗಳಿಗೊಳಪಟ್ಟು ಅನುಮೋದನೆ ನೀಡಲಾಗಿದೆ.

| | |
|---|---|
| 1 | ಅನುಮೋದಿತ ಏಕ ನಿವೇಶನ ವಿನ್ಯಾಸ ನಕ್ಷೆಯಲ್ಲಿನ ಸಾರ್ವಜನಿಕ ರಸ್ತೆಗಳ ಪ್ರಸ್ತಾಪಿತ ರಸ್ತೆ ವಿಸ್ತರಣೆ / ಅನುಮೋದಿತ ಮಹಾಯೋಜನೆಯಲ್ಲಿನ ಪ್ರಸ್ತಾಪಿತ ರಸ್ತೆ ಪಂಕ್ತೀಕರಣ ಜಾಗಗಳನ್ನು ಸಾರ್ವಜನಿಕ ಉಪಯೋಗಕ್ಕಾಗಿ ನೋಂದಾಯಿತ ಪರಿತ್ಯಜನಾ ಪತ್ರದ ಮೂಲಕ ಮುಫತ್ತಾಗಿ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ / ಸಂಬಂಧಿತ ಸ್ಥಳೀಯ ಸಂಸ್ಥೆಗೆ ಹಸ್ತಾಂತರಿಸತಕ್ಕದ್ದು. |
| 2 | ಪ್ರಸ್ತಾವನೆಗೆ ಸಂಬಂಧಿಸಿದ ದಾಖಲಾತಿಗಳ ಕುರಿತು ಸಲ್ಲಿಸಿರುವ ನೋಟರೀ ದೃಢೀಕೃತ ಪ್ರಮಾಣ ಪತ್ರದಲ್ಲಿನ ಅಂಶಗಳಿಗೆ ಅರ್ಜಿದಾರರು ಬದ್ಧರಾಗಿರುವುದು. |
| 3 | ಅನುಮೋದಿತ ಏಕ ನಿವೇಶನ ವಿನ್ಯಾಸ ನಕ್ಷೆಯ ಅನುಸಾರ ಕಟ್ಟಡ ನಕ್ಷೆಗಳಿಗೆ ಅನುಮೋದನೆ ಪಡೆದು ಅಭಿವೃದ್ಧಿ ಕಾರ್ಯಗಳನ್ನು ಕೈಗೊಳ್ಳತಕ್ಕದ್ದು. |
| 4 | ಅನುಮೋದಿತ ಏಕ ನಿವೇಶನ ವಿನ್ಯಾಸ ನಕ್ಷೆಯಲ್ಲಿ ಪ್ರಶ್ನಿತ ಜಮೀನುಗಳ ಬಳಿಯಲ್ಲಿ ಹಾಲಿರಸ್ತೆ ಅಗಲವನ್ನು ಗುರುತಿಸಿದ್ದು, ಕಟ್ಟಡ ನಕ್ಷೆ ಅನುಮೋದನೆ ಸಂದರ್ಭದಲ್ಲಿ ಲಗತ್ತಾಗಿರುವ ಹಾಲಿ ರಸ್ತೆಯ ಏಕರೂಪ ಹಾಲಿ ಅಗಲಕ್ಕನುಗುಣವಾಗಿ ವಲಯ ನಿಯಮಾವಳಿಗಳ ಅನುಸಾರ ಅನುಮತಿಸಬಹುದಾದ ಗರಿಷ್ಠ ಎಫ್.ಎ.ಆರ್ ಅನುಪಾತವನ್ನು ಕಟ್ಟಡ ನಕ್ಷೆ ಅನುಮೋದಿಸುವ ಸಕ್ಷಮ ಪ್ರಾಧಿಕಾರವು ಅನುಮತಿಸತಕ್ಕದ್ದು. |
| 5 | ಅನುಮೋದಿತ ಏಕ ನಿವೇಶನ ನಕ್ಷೆಯಂತೆಯೇ ಅಭಿವೃದ್ಧಿ ಕಾರ್ಯಗಳನ್ನು ಕಾರ್ಯಗತ ಮಾಡುವುದು, ಪ್ರಾಧಿಕಾರದ ಪೂರ್ವಾನುಮತಿ ಇಲ್ಲದೆ ಯಾವುದೇ ಬದಲಾವಣೆಗಳನ್ನು ಮಾಡುವಂತಿಲ್ಲ. |

| | |
|---|---|
| 6 | ಪ್ರಶ್ನಿತ ನಿವೇಶನಕ್ಕೆ ಕುಡಿಯುವ ನೀರು, ತ್ಯಾಜ್ಯ ನೀರು, ವಿಲೇವಾರಿ ಒಳಚರಂಡಿ ವ್ಯವಸ್ಥೆಯನ್ನು ಅರ್ಜಿದಾರರೇ ಕಲ್ಪಿಸತಕ್ಕದ್ದು ಹಾಗೂ ಉದ್ದೇಶಿತ ವಸತಿಯೇತರ ವಿನ್ಯಾಸದಲ್ಲಿ ಒಟ್ಟು ಕ್ಷೇತ್ರದಲ್ಲಿ ಬೀಳುವ ಮಳೆನೀರು ವ್ಯರ್ಥವಾಗಿ ಹೋಗದಂತೆ ಉದ್ದೇಶಿತ ಜಮೀನಿನಲ್ಲಿಯೇ ಭೂಮಿಯ ಒಳಗಡೆ ಇಂಗುವಂತೆ ಮಾಡಲು ವಿನ್ಯಾಸವನ್ನು ಸಿದ್ದಪಡಿಸಿ ಪೂರ್ಣ ವಿವರಗಳನ್ನು ನಕ್ಷೆಯಲ್ಲಿ ಗುರುತಿಸಿ ತೋರಿಸತಕ್ಕದ್ದು. |
| 7 | ಏಕ ನಿವೇಶನ ವಿನ್ಯಾಸ ನಕ್ಷೆ ಅನುಮೋದನೆಯು ಆಸ್ತಿಯ ಹಕ್ಕಿನ ಪ್ರತಿಪಾದನೆಗೆ ದಾಖಲೆಯಾಗುವುದಿಲ್ಲ. ಭೂಸುಧಾರಣೆ ಕಾಯ್ದೆಯಡಿ / ಭೂಕಂದಾಯ ಕಾಯ್ದೆ 1964 ರ ಕಲಂ 136 (3) ರ ಅಡಿಯಲ್ಲಾಗಲೀ ಪ್ರಕರಣಗಳು ಬಾಕಿ ಇದ್ದಲ್ಲಿ ಏಕ ನಿವೇಶನ ವಿನ್ಯಾಸ ನಕ್ಷೆ ಅನುಮೋದನೆಯು ಅಂತಿಮ ಆದೇಶಕ್ಕೆ ಒಳಪಟ್ಟಿರುತ್ತದೆ. ಈ ಬಗ್ಗೆ ಅರ್ಜಿದಾರರು ನ್ಯಾಯಾಲಯದ ಅಂತಿಮ ಆದೇಶಕ್ಕೆ ಬದ್ಧರಾಗಿರತಕ್ಕದ್ದು ಮತ್ತು ಯಾವುದೇ ಸಂದರ್ಭದಲ್ಲಿ ಏಕ ನಿವೇಶನ ವಿನ್ಯಾಸ ನಕ್ಷೆ ಅನುಮೋದನೆ ಸಂಬಂಧ ಪಾವತಿಸಿದ್ದ ಶುಲ್ಕಗಳನ್ನು ಹಿಂತಿರುಗಿಸಲಾಗುವುದಿಲ್ಲ. |
| 8 | ಅರ್ಜಿದಾರರು ಉದ್ದೇಶಿರುವ ಜಮೀನುಗಳಲ್ಲಿ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದ ಅಥವಾ ಅನ್ಯಖಾಸಗಿ ಜಮೀನುಗಳೇನಾದರೂ ಸೇರಿಕೊಂಡಿರುವುದು ತಿಳಿದುಬಂದಲ್ಲಿ ಅಂತಹ ಸಂದರ್ಭದಲ್ಲಿ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದ ಆಯುಕ್ತರು ಏಕ ನಿವೇಶನ ವಿನ್ಯಾಸ ನಕ್ಷೆಯನ್ನು ಮಾರ್ಪಾಡು ಮಾಡಲು ಅಥವಾ ಹಿಂತೆಗೆದುಕೊಳ್ಳಲು ಅಧಿಕಾರವುಳ್ಳವರಾಗಿರುತ್ತಾರೆ. |
| 9 | ಪ್ರಸ್ತಾವನೆಗೆ ಸಂಬಂಧಿಸಿದಂತೆ ಅರ್ಜಿದಾರರು ಸುಳ್ಳು ದಾಖಲೆ ಅಥವಾ ಇನ್ನಿತರೆ ಪೋರ್ಜರಿ ದಾಖಲಾತಿಗಳನ್ನು ನೀಡಿರುವುದು ರುಜುವಾತಾದಲ್ಲಿ ಈಗ ನೀಡಿರುವ ಏಕ ನಿವೇಶನ ವಿನ್ಯಾಸ ನಕ್ಷೆ ಅನುಮೋದನೆಯು ತನ್ನಿಂದತಾನೆ ರದ್ದಾಗುವುದೆಂದು ಭಾವಿಸತಕ್ಕದ್ದು. |
| 10 | ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರವು ಮುಂದೆ ಸೂಚಿಸಬಹುದಾದ ಎಲ್ಲಾ ತಾಂತ್ರಿಕ ವಿಷಯಗಳಿಗೆ ಹಾಗೂ ಶುಲ್ಕಗಳನ್ನು ತುಂಬುವುದರ ನಿರ್ಣಯಕ್ಕೆ ಅರ್ಜಿದಾರರು ಬದ್ದರಾಗಿರುವುದು. |
| 11 | ಪ್ರಶ್ನಿತ ನಿವೇಶನದಲ್ಲಿ ಘನ ತ್ಯಾಜ್ಯಗಳನ್ನು, ಹಸಿತ್ಯಾಜ್ಯ, ಒಣತ್ಯಾಜ್ಯ, ಪ್ಲಾಸ್ಟಿಕ್ ಮತ್ತು ಇತ್ಯಾದಿ ವಿಂಗಡಿಸಿ. Compost ಮಾಡಲು ಸೂಕ್ತ ಸ್ಥಳವನ್ನು ಕಾಯ್ದಿರಿಸತಕ್ಕದ್ದು. |
| 12 | ಪ್ರಶ್ನಿತ ನಿವೇಶನದಲ್ಲಿ ಕಟ್ಟಡ ನಿರ್ಮಾಣ ಮಾಡುವ ಪೂರ್ವಭಾವಿಯಾಗಿ ಸಂಬಂಧಪಟ್ಟ ಸಕ್ಷಮ ಪ್ರಾಧಿಕಾರಗಳಿಂದ ಕಟ್ಟಡ ನಕ್ಷೆಗೆ ನಿರಾಕ್ಷೇಪಣಾ ಪತ್ರ / ಅನುಮೋದನೆಗಳಿಂದ ಪಡೆಯತಕ್ಕದ್ದು. |
| 13 | ಅಭಿವೃದ್ದಿದಾರರು ಕೊಳಚೆ ನೀರನ್ನು ಬಯಲು ಜಾಗ / ಖಾಲಿ ಜಾಗಗಳಿಗೆ ಬಿಡದೇ ಸಂಸ್ಕರಿಸಿ ಕುಡಿಯುವ ನೀರಿನ ಹೊರತಾಗಿ ಉಳಿದ ಬಳಕೆಗಾಗಿ ಬಳಸತಕ್ಕದು. |
| 14 | ಏಕ ನಿವೇಶನ ವಿನ್ಯಾಸ ನಕ್ಷೆ ಅನುಮೋದನೆಯಾದ ನಂತರ, ಬಹು ನಿವೇಶನ ವಿನ್ಯಾಸ ನಕ್ಷೆ ಪಡೆಯಲು ಇಚ್ಛಿಸಿದ್ದಲ್ಲಿ ಪ್ರಾಧಿಕಾರಕ್ಕೆ ಮನವಿ ಸಲ್ಲಿಸಿ, ಬಹು ನಿವೇಶನ ವಸತಿಯೇತರ ವಿನ್ಯಾಸ ನಕ್ಷೆಯನ್ನು ವಲಯ ನಿಯಮಾವಳಿಗಳ ಅನುಸಾರ ಅನುಮೋದನೆ ಪಡೆಯತಕ್ಕದ್ದು. |
| 15 | ಪ್ರಶ್ನಿತ ನಿವೇಶನದಲ್ಲಿ ಉದ್ದೇಶಿತ ಕಟ್ಟಡದ ಒಟ್ಟು ಫ್ಲೋರ್ ವಿಸ್ತೀರ್ಣದ ಪ್ರತಿ 240.0ಚ.ಮೀಗೆ ಒಂದು ಮರದಂತೆ ಗಿಡ / ಮರಗಳನ್ನು ನೆಟ್ಟು ಪೋಷಿಸತಕ್ಕದ್ದು. |

ವಿಷಯ:- ಬೆಂಗಳೂರು ಪೂರ್ವ ತಾಲ್ಲೂಕು, ಕೆ.ಆರ್ ಪುರ ಹೋಬಳಿ, ನಲ್ಲೂರಹಳ್ಳಿ ಗ್ರಾಮದ ಸ.ನಂ.1/1 ರ ಪೈಕಿ 1ಎ-00ಗುಂ ವಿಸ್ತೀರ್ಣದ ಜಮೀನಿನಲ್ಲಿ ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961 ರ ಕಲಂ 17 ರ ಅಡಿಯಲ್ಲಿ ವಸತಿ ಉದ್ದೇಶದ ಏಕ ನಿವೇಶನ ನಕ್ಷೆಗೆ ಶ್ರೀ.ಲೂಯಿಜಾನ್ ಕುರಿಯನ್ ರವರ ಪರವಾಗಿ ನೋಂದಾಯಿತ ಜಿ.ಪಿ.ಎ & ಜಿ.ಡಿ.ಎ ದಾರರಾದ M/s.Mybridie Solutions LLP ರವರ ಪರವಾಗಿ ಅನುಮೋದನೆ ನೀಡುವ ಬಗ್ಗೆ.

---

| | |
|---|---|
| 16 | ಪ್ರಾಧಿಕಾರವು ಆಗಿಂದಾಗ್ಗೆ ವಿಧಿಸುವ ಇತರೆ ಷರತ್ತುಗಳಿಗೆ ಬದ್ಧರಾಗಿರುವುದು. |

ಮೇಲ್ಕಂಡ ಷರತ್ತುಗಳಿಗೊಳಪಟ್ಟು, ಬೆಂಗಳೂರು ಪೂರ್ವ ತಾಲ್ಲೂಕು, ಕೆ.ಆರ್ ಪುರ ಹೋಬಳಿ, ನಲ್ಲೂರಹಳ್ಳಿ ಗ್ರಾಮದ ಸ.ನಂ.1/1 ರ ಪೈಕಿ 1ಎ-00ಗುಂ ವಿಸ್ತೀರ್ಣದ ಜಮೀನಿನಲ್ಲಿ ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961 ರ ಕಲಂ 17 ರ ಅಡಿಯಲ್ಲಿ ವಸತಿ ಉದ್ದೇಶದ ಏಕ ನಿವೇಶನ ವಿನ್ಯಾಸ ನಕ್ಷೆಗೆ ಅನುಮೋದನೆ ನೀಡಲಾಗಿದೆ.

ಆಯುಕ್ತರು,
ಬೆಂಅಪ್ರಾ, ಬೆಂಗಳೂರು

**ಇವರಿಗೆ,**

ಶ್ರೀ.ಲೂಯಿಜಾನ್ ಕುರಿಯನ್ ರವರ ಪರವಾಗಿ,
ನೋಂದಾಯಿತ ಜಿ.ಪಿ.ಎ & ಜಿ.ಡಿ.ಎ ದಾರರಾದ
M/s.Mybridie Solutions LLP,
ನಂ.ಜಿ.007, ರಿಂದ 009, ನೆಲಮಹಡಿ,
ರಹೇಜ ಛೇಂಬರ್ಸ್, ಮ್ಯೂಸಿಯಂ ರಸ್ತೆ,
ಬೆಂಗಳೂರು-560001.